ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾ.ಕ.ಕೊ/33/2015-16 ದಿನಾಂಕ:12-04-2016

| ಅರ್ಜಿದಾರರು | ತಕರಾರುದಾರರು |
|---|---|
| 1)ಅಂಬಿಕಮ್ಮ ಗಂಡ ಲೇಟ್ ವೀರಭದ್ರಚಾರಿ<br>2)ಮಲ್ಲಿಕಾರ್ಜುನಚಾರಿ ತಂದೆ ಲೇಟ್ ನಾಗಭೂಷಣಚಾರಿ<br>3)ಪದ್ಮಾ ಗಂಡ ಲೇಟ್ ಶಿವಲಿಂಗಚಾರಿ<br>ಬಣವಿಕಲ್ಲು ಗ್ರಾಮ ಕೂಡ್ಲಿಗಿ ತಾಲೂಕು | 1) ಕಡ್ಲಿ ಕಲ್ಲುಮನಿ ವೀರಣ್ಣ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾ// |

**ಕೂಡ್ಲಿಗಿ ತಾಲೂಕು ಕೊಟ್ಟೂರು** ಪಟ್ಟಣದ ಸನಂ 569 ವಿಸ್ತೀರ್ಣ:-3.28 ಎಕ್ರೆ ಜಮೀನಿನ **ಪೋತಿವಾರಸು** ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.

ಪ್ರಸ್ತಾವನೆ:

**ಕೂಡ್ಲಿಗಿ** ತಾಲೂಕು ಕೊಟ್ಟೂರು ಪಟ್ಟಣದ ಸನಂ 569 ವಿಸ್ತೀರ್ಣ:-3.28 ಎಕ್ರೆ ಜಮೀನನ್ನು ಸದರಿ **ತಾಲೂಕು** ಬಣವಿಕಲ್ಲು ಗ್ರಾಮದ ಅಂಬಿಕಮ್ಮ ಗಂಡ ಲೇಟ್ ವೀರಭದ್ರಾಚಾರಿ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕೊಟ್ಟೂರು ಇವರು ನಮೂನೆ-21 ರ ನೋಟಿಸನ್ನು ದಿನಾಂಕ:-06-06-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಕಡ್ಲಿ ಕಲ್ಲುಮನಿ ವೀರಣ್ಣ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್:-130/2014-15 ದಿನಾಂಕ:-27-05-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ:-11-08-2015 ರಿಂದ 12-04-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕೊಟ್ಟೂರು ಪಟ್ಟಣದ ಸನಂ 569 ವಿಸ್ತೀರ್ಣ:-3.28 ಎಕ್ರೆ ಜಮೀನು ನಮ್ಮ ಅಜ್ಜನಾದ ಅಕ್ಕಸಾಲಿ ವೀರಪ್ಪ ತಂದೆ ನಾಗಲಿಂಗಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟ ಇರುತ್ತದೆ ಇವರು ದಿನಾಂಕ:-18-04-1969 ರಂದು ನಮ್ಮ ಅಜ್ಜಿ ವಿರುಪಮ್ಮ ಗಂಡ ಅಕ್ಕಸಾಲಿ ವೀರಪ್ಪ ಇವರು ದಿನಾಂಕ:-04-11-1972 ರಂದು ಹಾಗೂ ಇನ್ನಿತರೆ ವಾರಸುದಾರರು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನು ಅಕ್ಕಸಾಲಿ ವೀರಪ್ಪ ತಂದೆ ನಾಗಲಿಂಗಪ್ಪ ಇವರ ಹೆಸರಿನಲ್ಲಿದ್ದು ಇವರಿಗೆ ಸಂಬಂಧಿಗಳು ಯಾರು ಇರುವುದಿಲ್ಲ ಕಾರಣ ಪೋತಿವಾರಸು ಪ್ರಕಾರ ಅರ್ಜಿದಾರರ ಹೆಸರಲ್ಲಿ ಖಾತಾ ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ಬಗ್ಗೆ ಕಂದಾಯ ಪರಿವೀಕ್ಷಕರು ಗ್ರಾಮದಲ್ಲಿ ಮರು ವಿಚಾರಣೆ ಮಾಡಲಾಗಿ ಸದರಿ

ಅರ್ಜಿದಾರರು ಸದರಿ ಜಮೀನಿಗೆ ಹಕ್ಕುದಾರರು ಎನ್ನುವ ಬಗ್ಗೆ ಸ್ಪಷ್ಟವಾದ ವರದಿ ನೀಡಿಲ್ಲದ ಕಾರಣ ವಾರಸತ್ವದ ಬಗ್ಗೆ ಸಂಶಯಾಸ್ಪದ ಕಂಡು ಬಂದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕೊಟ್ಟೂರು ಪಟ್ಟಣದ ಸನಂ 569 ವಿಸ್ತೀರ್ಣ:-3.28 ಎಕ್ರೆ ಜಮೀನಿನ ವಾರಸತ್ವದ ಬಗ್ಗೆ ಸಂಶಯಾಸ್ಪದ ಎಂದು ಕಂಡು ಬಂದ ಕಾರಣ ಅರ್ಜಿದಾರರ ಕೋರಿಕೆಯನ್ನು ತಳ್ಳಿಹಾಕುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 12-04-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ ಕೊಟ್ಟೂರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಅಂಬಿಕಮ್ಮ ಗಂಡ ಲೇಟ್ ವೀರಭದ್ರಚಾರಿ. ಮಲ್ಲಿಕಾರ್ಜುನಾಚಾರಿ ತಂದೆ ಲೇಟ್ ನಾಗಭೂಷಣಾಚಾರಿ. ಪದ್ಮಾ ಗಂಡ ಲೇಟ್ ಶಿವಲಿಂಗಾಚಾರಿ. ಬಣವಿಕಲ್ಲು ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಕಡ್ಲಿ ಕಲ್ಲುಮನಿ ವೀರಣ್ಣ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ರವಾನಿಸಲಾಗಿದೆ
ಕ್ರ.ಸಂ.
ದಿನಾಂಕ